"ನನಗೂ ಹಾಗೆ ಅನ್ನಿಸುತ್ತದೆ. ಎಲ್ಲಾ ಘಟನೆಗಳೂ ಪೂರ್ವ ನಿರ್ಧರಿತವಾದಂತೆ ಕಂಡರೂ ವರ್ತಮಾನದಲ್ಲಿ ಅನಾವರಣಗೊಳ್ಳುವವರೆಗೂ ಅದಕ್ಕೊಂದು ಸಣ್ಣ ಗುರುತೂ ಇರುವುದಿಲ್ಲ. ನಾನು ರಾಮಾಯಣ, ಮಹಾಭಾರತ, ಭಗವದ್ಗೀತೆ ಅಲ್ಲದೆ ಕುರಾನ್, ಬೈಬಲ್‌ಗಳನ್ನೂ ಓದಿದ್ದೇನೆ. ಎಷ್ಟು ಓದಿದರೂ ಮನಸ್ಸಿನ ಗೊಂದಲಗಳನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡಲಂತೂ ಸಾಧ್ಯವಿಲ್ಲ ಅನ್ನಿಸುತ್ತದೆ..." ನರಸಿಂಹರೆಡ್ಡಿ ನಿಜಕ್ಕೂ ವಿಚಾರವಂತರಾಗಿದ್ದರು.

"ಶ್ರೀಮಂತರು ಸಾಮಾನ್ಯವಾಗಿ ಓದು, ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಅಂತಹುದರಲ್ಲಿ ನಿಮ್ಮನ್ನು ನೋಡಿದರೆ ಖುಷಿಯೆನಿಸುತ್ತಿದೆ..." ಹೆಮ್ಮೆಯಿಂದಲೇ ಹೇಳಿದ್ದೆ ನಾನು.

"ಏನು ಶ್ರೀಮಂತಿಕೆಯೆಂದರೆ ನಿಮ್ಮ ಅರ್ಥದಲ್ಲಿ..." ಚೆರ್ಲಪಲ್ಲಿ ನರಸಿಂಹರೆಡ್ಡಿ ಥಟ್ಟನೆ ಕೇಳಿದ್ದರು. ನಾನು ಉತ್ತರ ಕೊಡಲು ತಿಣುಕಾಡುತ್ತಿದ್ದೆ.

"ಸುಖ ಮತ್ತು ತೃಪ್ತಿ ಮಾತ್ರವೇ ಶ್ರೀಮಂತಿಕೆ ಅಂಥ ನನ್ನ ವೈಯಕ್ತಿಕ ಅಭಿಪ್ರಾಯ. ಇವೆರಡೂ ಲಭ್ಯವಾಗಬೇಕಾದರೆ ಹಸಿವು ಮತ್ತು ಕಾಮ ಸದಾ ಜಾಗೃತವಾಗಿರಬೇಕು. ಈ ಬಿಯರ್ ಮತ್ತು ಮೀನಿನಿಂದ ನಾವೀಗ ಈ ಕ್ಷಣಕ್ಕೆ ಶ್ರೀಮಂತರಾಗಿದ್ದೇವೆ. ಯಾರಿಗೆ ಜೀರ್ಣ ಮಾಡಿಕೊಳ್ಳಲು ಸಾಧ್ಯವಾಗುವುದಿಲ್ಲವೋ ಏನೆಲ್ಲಾ ಇದ್ದರೂ ಅವರು ಬಡವರೇ. ಕೌರವರು, ಪಾಂಡವರು, ರಾಮ ಲಕ್ಷ್ಮಣರೆಲ್ಲರೂ ಅರಸರೂ ಮತ್ತು ಶ್ರೀಮಂತರೇ. ಆದರೆ ಅವರ ಬದುಕಿನ ಬಹುಪಾಲು ಸಮಯವನ್ನು ಜಗಳವಾಡುವುದರಲ್ಲಿ, ಯುದ್ಧ ಮಾಡುವುದರಲ್ಲಿ ವ್ಯರ್ಥ ಮಾಡಿಕೊಂಡರೆಂದೇ ನನ್ನ ಅಭಿಪ್ರಾಯ. ಪ್ರಪಂಚದ ಬಹುಪಾಲು ಶ್ರೀಮಂತರಿಗೆ ನಿಜಕ್ಕೂ ಸುಖ ಅನುಭವಿಸಲಾಗದ ಶಾಪಗಳು ಕಾಡುತ್ತವೆ." ಆತನ ವಾದದಲ್ಲಿ ಸ್ಪಷ್ಟತೆ, ಅಸ್ಪಷ್ಟತೆಗಳೆರಡೂ ತಳುಕು ಹಾಕಿಕೊಂಡಿರುವಂತೆ ಅನ್ನಿಸಿತ್ತು ನನಗೆ.

"ತುಂಬಾ ತಿಳಿದುಕೊಂಡಿದ್ದೀರಿ..." ಹೇಳಿದ್ದೆ ನಾನು.

"ಆದರೆ ಯಾವುದೂ ಶಾಶ್ವತವಲ್ಲ..." ಎಂದು ಅವರು ಸಣ್ಣ ನಿಟ್ಟುಸಿರು ಬಿಟ್ಟಿದ್ದರು. ಬಿಯರ್ ನನ್ನ ಮೆದುಳಿನಲ್ಲಿ ಸಣ್ಣ ಮಟ್ಟಿಗಿನ ಕಿಕ್ ಉಂಟು ಮಾಡುತ್ತಿರುವಂತೆ ಅನ್ನಿಸಿತು. ನಾನು ಮಧ್ಯಾಹ್ನ ವಿಮಾನ ನಿಲ್ದಾಣದಲ್ಲಿ ಇಳಿದಾಗ ಮೈಂಡ್ ಬ್ಲಾಕ್ ಆದಂತೆ ಮತ್ತೊಮ್ಮೆ ರಿಪೀಟ್ ಆಗಬಹುದೇನೋ ಎಂಬ ಭಯ ಆವರಿಸಿತ್ತು. ಅಷ್ಟರಲ್ಲಿ ಕರುಣಾಕರ ನಾಯರ್ ಪ್ರವೇಶ ಮಾಡಿದ್ದ. ಕೈನಲ್ಲಿದ್ದ ಕ್ಯಾರಿಯರನ್ನು ಟೀಪಾಯಿ ಮೆಲಿಟ್ಟಿದ್ದ. ಜೊತೆಗೆರಡು ಬಾಳೆಯ ಎಲೆ. ಸಮಯ ಹತ್ತು ಗಂಟೆಯಾಗಿತ್ತು.

"ಊಟ ಮಾಡೋಣ..." ನರಸಿಂಹರೆಡ್ಡಿ ಹೇಳಿದ್ದರು.

"ಹೊಟ್ಟೆ ತುಂಬಿದಂತಾಗಿದೆ..." ಹೇಳಿದ್ದೆ ನಾನು.

"ಅನ್ನ ತಿನ್ನದಿದ್ದರೆ ಊಟ ಮಾಡಿದಂತೆ ಹೇಗಾಗುತ್ತದೆ." ಕಡ್ಡಿ ತುಂಡರಿಸಿದಂತೆ ಹೇಳಿದ್ದರು ನರಸಿಂಹರೆಡ್ಡಿ.

ಕರುಣಾಕರ ನಾಯರ್ ಟೀಪಾಯಿ ಮೇಲೆ ಎರಡು ಬಾಳೆ ಎಲೆಗಳನ್ನು ಹರಡಿ ಊಟ ಬಡಿಸಿದ್ದ. ಘಮಘಮಿಸುವ ಅನ್ನ. ಮೊಳಕೆ ಹುರುಳಿ ಕಾಳಿನ ಮಸಾಲೆ ಸಾರು. ಹುರಿದ ಕಡಲೆ ಬೀಜ. ಊಟವೇ ಬೇಡ ಅನ್ನುತ್ತಿದ್ದವನು ಎರಡು ಸಾರಿ ಅನ್ನವನ್ನು, ಹುರುಳಿಕಾಳನ್ನು ಹಾಕಿಸಿಕೊಂಡು ತಿಂದಿದ್ದೆ. ನರಸಿಂಹರೆಡ್ಡಿ ಊಟ ಮಾಡಿ ಬಾಳೆಯ ಎಲೆಯನ್ನು ತೊಳೆದಂತೆ ನೆಕ್ಕಿದ್ದರು. ಕೈ ತೊಳೆಯಲೆಂದು ನರಸಿಂಹರೆಡ್ಡಿ ರೆಸ್ಟ್‌ರೂಮಿಗೆ ಹೋದಾಗ ಕರುಣಾಕರ ನಾಯರ್ ನನ್ನ ಹತ್ತಿರ ಬಂದು ಕಿವಿಯಲ್ಲಿ, "ಮತ್ತೆ ಬೇರೇನಾದರೂ ಅರೆಂಜ್ಮೆಂಟ್ ಮಾಡ್ಬೇಕಾ?..." ಎಂದು ಮೆಲ್ಲಗೆ ಕೇಳಿದ್ದ. ಅವನು ಹಾಕಿದ್ದ ಫ್ರೆಂಚ್ ಮಸ್ಕ್ ವಾಸನೆ ಸುಮಧುರವಾಗಿ ಮೂಗಿಗೆ ಬಡಿದಿತ್ತು.

"ಅಂದರೆ ಅರ್ಥವಾಗಲಿಲ್ಲ..." ನನಗೆ ನಿಜವಾಗಿಯೂ ತಕ್ಷಣ ಆತನ ಮಾತುಗಳು